ಇಬ್ಬರು ಚಿಕ್ಕಪ್ಪಂದಿರಿಗೂ ಕೇಳಿಸುವಂತೆ ರಾಜಣ್ಣ, 'ಈ ವಿಷಯವನ್ನು ಹೊರಗೆ ಯಾರಿಗೂ ಹೇಳಬೇಡಿ. ಇನ್ನೊಂದು ವಾರ ಎಲ್ಲರೂ ಬಾಯಿಮುಚ್ಕೊಂಡು ಇರಿ' ಎಂದು ಮೂಲೆಯಲ್ಲಿ ಕೂತಿದ್ದ ಚಂದ್ರಪ್ಪನಿಗೂ ಕೇಳಿಸುವಂತೆ ಜೋರಾಗಿಯೇ ಹೇಳಿದ.

ರಾಜಣ್ಣ ಹೇಳೋ ಮಾತೂ ಸರಿಯಾಗಿಯೇ ಇದೆ ಎಂಬಂತೆ ಚಿಕ್ಕಪ್ಪಂದಿರಿಬ್ಬರೂ ಮೌನದಲ್ಲಿಯೇ ಸಮ್ಮತಿಸುತ್ತಾ ಅವರವರ ಮನೆ ಕಡೆಗೆ ಹೊರಟರು.

2

ಚಿನ್ನವ್ವನ ಗಂಡ ಸಿದ್ದೇಗೌಡ ಊರಿನಲ್ಲಿ ತುಂಬಾ ಅಂಜಿಕೆ, ಅಳುಕು, ಸಂಕೋಚವಿಟ್ಟುಕೊಂಡು ಬದುಕಿದ್ದ ಮನುಷ್ಯ. ಅವನು ಬದುಕಿದ್ದಾಗ ಹಿರಿಯರಿಗೆ ತೋರುತ್ತಿದ್ದ ಗೌರವ, ಕಿರಿಯರಿಗೆ ತೋರುತ್ತಿದ್ದ ಪ್ರೀತಿ, ಹೆಂಡತಿಯಲ್ಲಿ ತೋರುತ್ತಿದ್ದ ನಂಬಿಕೆ, ಸ್ನೇಹಿತರ, ಬಂಧುಬಳಗದವರ ನಡುವೆ ಹೊಂದಿದ್ದ ವಿಶ್ವಾಸ ಇವೆಲ್ಲಾ ಅವನ ಉತ್ತಮ ನಡವಳಿಕೆಗೆ ಸಾಕ್ಷಿಯಾಗಿದ್ದವು. ಊರಿನ ಜನ ಈಗಲೂ ಅವನ ಗುಣವನ್ನು ಸ್ಮರಿಸುತ್ತಾರೆ. ಆತ ಆರಡಿ ಎತ್ತರದ ಅಜಾನುಬಾಹು. ದುಂಡನೆಯ ಮುಖ, ಅಗಲವಾದ ಎದೆ, ಉಕ್ಕಿನಂತಹ ಕೈಕಾಲುಗಳು, ಮುಖದ ತುಂಬಾ ಬಿಟ್ಟ ಗಿರಿಜಾ ಮೀಸೆ, ಕಿವಿಮೇಲೆ ಮೊಳದುದ್ದ ಬೆಳೆದು ನಿಂತ ಕಪ್ಪು ಕೂದಲು. ಅವನ ಕಿವಿಯೋಲೆ ಹಾಗೂ ಬೆಳ್ಳಿಯ ಕೈಕಡಗ ಇವೆಲ್ಲಾ ಅವನ ಶಕ್ತಿಸಾಮರ್ಥ್ಯಕ್ಕೆ ಕುರುಹುಗಳಾಗಿದ್ದವು. ಒಂದೇ ಮಾತಿನಲ್ಲಿ ಹೇಳುವುದಾದರೆ ಅವನ ಶರೀರ ಚಳಿ ಮಳೆ ಬಿಸಿಲಿಗೆ ಬಗ್ಗದ ಬಲಭೀಮ ದೇಹವಾಗಿತ್ತು. ಜೊತೆಗೆ ಆತ ಶ್ರಮಜೀವಿಯಾಗಿದ್ದ.

ಆದರೆ ಅವನ ಹೆಂಡತಿ ಚಿನ್ನವ್ವ ಮಾತ್ರ ತುಂಬಾ ಸಣ್ಣಗೆ, ನೀಳಗೆ, ಲಕ್ಷಣವಾದ ಆರೋಗ್ಯವಂತ ಹೆಣ್ಣು. ಆಕೆಯೂ ದುಡಿಮೆಯಲ್ಲಿ ಮೈಗಳ್ಳಿಯಲ್ಲ. ಅವಳ ದುಡಿಮೆಯೇ ಅವಳ ಸೌಂದರ್ಯದ, ಆರೋಗ್ಯದ ಗುಟ್ಟು. ಅವರಿಬ್ಬರದೂ ಅನ್ಯೋನ್ಯವಾದ ಹೊಂದಾಣಿಕೆಯ, ಪರಸ್ಪರ ಪ್ರೀತಿಯ ಉಲ್ಲಾಸದ ಜೀವನವಾಗಿತ್ತು. ಅವನು ತನ್ನ ತಮ್ಮಂದಿರಿಂದ ಬೇರೆ ಆದ ಮೇಲೆ ತನ್ನ ಹಣಕಾಸಿನ ನಿರ್ವಹಣೆಯನ್ನು ಹಾಗೂ ತನ್ನ ಮನೆಯ ಯಜಮಾನಿಕೆಯನ್ನು ತನ್ನ ಹೆಂಡತಿ ಚಿನ್ನವ್ವನಿಗೇ ವಹಿಸಿಬಿಟ್ಟಿದ್ದ. ಚಿನ್ನವ್ವ ಮದುವೆ ಆಗಿ ತನ್ನ ತವರು ಬಿಟ್ಟು ಬಂದ ಮೇಲೆ ತನ್ನ ತವರನ್ನೇ ಮರೆತವಳಂತೆ ತನ್ನ ಗಂಡನ ಮನೆಯಲ್ಲಿ ನಿಂತು ಬದುಕಿ ಬಾಳಿದವಳು. ಅವರಿಬ್ಬರ ಬದುಕು ಊರಿನಲ್ಲಿ ಬೇರೆಯವರಿಗೆ ಅನುಕರಣೀಯವಾಗಿತ್ತು, ಮಾದರಿಯಾಗಿತ್ತು.

ಊರಿನ ಹಿರಿಯ ಮುಖಂಡರಲ್ಲಿ ಒಬ್ಬನಾಗಿದ್ದ ಲಿಂಗೇಗೌಡರಿಗೆ ಇದ್ದ ಇಬ್ಬರು ಮಕ್ಕಳಲ್ಲಿ ಸಿದ್ದೇಗೌಡನೇ ಹಿರಿಯವನು. ಕಿರಿಯ ಮಗ ನಂಜೇಗೌಡ. ಆಮೇಲೆ ಲಿಂಗೇಗೌಡನ ಅಪ್ಪನ ಅಪ್ಪ ಸಿದ್ದೇಗೌಡರ ಹೆಸರನ್ನು ಬಿಟ್ಟರೆ ಅವರಿಗಿಂತ ಹಿಂದಿನ ತಲೆಮಾರಿನ ಹೆಸರುಗಳು ಸಿದ್ದೇಗೌಡರಿಗೆ ಗೊತ್ತಿರಲಿಲ್ಲ. ಊರಿಗೆ ಹಾಲುಗಂಬ ಹಾಕಿದ ಊರಿನ ಮೂವರು ಹಿರಿಯ ವ್ಯಕ್ತಿಗಳಲ್ಲಿ ಸಿದ್ದೇಗೌಡರೂ ಒಬ್ಬರಾಗಿದ್ದರು. ಹಾಗಾಗಿಯೇ ಊರಿನಲ್ಲಿ ಅವರ ಪೈಕಿಯ ಜನರನ್ನು 'ಸಿದ್ದೇಗೌಡರ ಪೈಕಿ'ಯವರು ಅಂತಲೇ ಗುರುತಿಸುತ್ತಿದ್ದರು. ಲಿಂಗೇಗೌಡರು ತೀರಿಕೊಂಡಾಗ ಅವರ ಶವವನ್ನು ಊರುಮಗ್ಗುಲಿನ ಹೊಲದಲ್ಲೇ ಹಾಕಿದ್ದರು. ಅವರಿಗಿಂತ ಮೊದಲೇ ಅವರ ಹೆಂಡತಿ ತಿಮ್ಮವ್ವ ಮಠದಲ್ಲೇ ತೀರಿಕೊಂಡಿದ್ದರಿಂದ ಅವರ ಶವವನ್ನೂ ಅಲ್ಲೇ ತಂದು ದಹನ ಮಾಡಲಾಗಿತ್ತು. ಸಿದ್ದೇಗೌಡರು ಅದೇ ಜಾಗದಲ್ಲಿ ಗಂಡಹೆಂಡತಿಯ ಸಮಾಧಿ ಕಟ್ಟಿಸಿ ಮಂಟಪ ಕಟ್ಟಿಸಿದ್ದರು. ಹೊಲಮಾಳದಲ್ಲಿ ಕೆಲಸ ಮಾಡುವ ಜನಕ್ಕೆ, ಜಾನುವಾರ ಕಾಯುವ ಹುಡುಗರಿಗೆ, ದಾರಿಹೋಕರಿಗೆ ಮಳೆ ಚಳಿ ಬೇಸಿಗೆಯಲ್ಲಿ ಅದು ಉತ್ತಮ ರಕ್ಷಣೆಯ ತಾಣವಾಗಿತ್ತು. ಅದರ ಸುತ್ತ ಚಿನ್ನವ್ವ ಒಳ್ಳೊಳ್ಳೆ ನೆರಳಿನ ಮರಗಳನ್ನು ನೆಟ್ಟು ಬೆಳಸಿ ತಂಪು ಮಾಡಿದ್ದಳು.

ಸಿದ್ದೇಗೌಡರು ಮನೆಗೆ ಹಿರಿಮಗನಾಗಿದ್ದರಿಂದ ಅವರ ತಂದೆ ಬದುಕಿದ್ದಾಗಲೇ ಅವರಿಗೆ ಮದುವೆ ಮಾಡಿ ಮನೆಯ ನಿರ್ವಹಣೆಯನ್ನು ವಹಿಸಿದ್ದರು. ನಂತರ ಸಿದ್ದೇಗೌಡರೇ ಮುಂದೆ ತಮ್ಮಂದಿರಾದ ಎಮ್ಮೆಕಾಳಯ್ಯ ಮತ್ತು ಕಜ್ಜಿನಿಂಗಣ್ಣರಿಗೆ ಮದುವೆ ಮಾಡಿದ್ದರು. ಅವರಿಬ್ಬರೂ ಅಣ್ಣ ಸಿದ್ದೇಗೌಡರ ಮಾತನ್ನು ಎಂದೂ ಮೀರಿದವರಲ್ಲ. ಅವರು ಹಾಕಿದ ಗೆರೆಯನ್ನು ಅವರಿಬ್ಬರೂ ಮೀರುತ್ತಿರಲಿಲ್ಲ. ಅವರಿಬ್ಬರೂ ತನ್ನಣ್ಣನ ಜೊತೆ ವ್ಯವಸಾಯದಲ್ಲಿ, ವ್ಯವಹಾರಗಳಲ್ಲಿ ನಿಷ್ಠೆಯಿಂದ ದುಡಿಯುತ್ತಿದ್ದರು. ತಮ್ಮ ಅವ್ವ ತಿಮ್ಮವ್ವನಿಗೆ ತಮ್ಮ ಅಪ್ಪ ಲಿಂಗೇಗೌಡರ ಮೇಲೆ ಏನೂ ಕಾರಣವಿಲ್ಲದೆಯೇ